ವಿಶ್ವವಾಣಿ

ಸಂಪಾದಕೀಯ

ಲಸಿಕೆಯೊಂದೇ ಪರಿಹಾರ

ಭಾರತ ಮೂರನೇ ಅಲೆಯ ಕರೋನಾ ಆತಂಕದಲ್ಲಿದೆ. ವಿಶ್ವದ ಕೆಲ ದೇಶಗಳಲ್ಲಿ ನಾಲ್ಕನೇ ಅಲೆಯೂ ಕಾಣಿಸಿಕೊಳ್ಳುತ್ತಿದೆ. ಇಡೀ ವಿಶ್ವದ ವೈದ್ಯಕೀಯ ಹಾಗೂ ಔಷಧ ಕ್ಷೇತ್ರ ಕರೋನಾ ವಿರುದ್ಧದ ಹೋರಾಟಕ್ಕೆ ಅವಿರತ ಹೋರಾಟ ನಡೆಸಿ, ಹಲವು ಪ್ರಯೋಗ ನಡೆಯುತ್ತಿದ್ದರೂ, ಆ ಎಲ್ಲವನ್ನು ಮಿರಿ ರೂಪಾಂತರಿ ಕರೋನಾ ವೈರಾಣು ಭಾರಿ ಆತಂಕವನ್ನು ಸೃಷ್ಟಿಸಿದೆ. ಆತಂಕದಲ್ಲಿಯೇ ಜೀವನ ಸಾಗಿಸುತ್ತಿರುವ ಎಲ್ಲರಿಗೂ ಕರೋನಾದಿಂದ ಮುಕ್ತಿ ಎನ್ನುವ ಪ್ರಶ್ನೆ ಕಾಡುತ್ತಿದೆ. ಆದರೆ ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರು ಸೇರಿದಂತೆ ಬಹುತೇಕ ತಜ್ಞರು, 'ಕರೋನಾದೊಂದಿಗೆ ಜೀವಿಸುವುದನ್ನು ಕಲಿಯಬೇಕು. ಲಾಕ್‌ಡೌನ್, ಸೆಮಿ ಲಾಕ್‌ಡೌನ್ ಸೇರಿದಂತೆ ಈಗ ಹೇರುತ್ತಿರುವ ಎಲ್ಲ ನಿರ್ಬಂಧಗಳು ತಾತ್ಕಲಿಕ' ಎನ್ನುವ ಮಾತನ್ನು ಹೇಳಿದ್ದಾರೆ. ಹಾಗಾದರೆ, ಕರೋನಾ ವಿರುದ್ಧದ ಹೋರಾಟಕ್ಕೆ ಶಾಶ್ವತ ಪರಿಹಾರ ಏನು ಎನ್ನುವ ಪ್ರಶ್ನೆಗೆ ಉತ್ತರ 'ಲಸಿಕೆ'. ಭಾರತದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಲಸಿಕಾ ಅಭಿಯಾನವನ್ನು ಭಾರಿ ವೇಗವಾಗಿ ನಡೆಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಕೆಲವರು ಹೆದರಿಕೆಯಿಂದಲೋ ಅಥವಾ ಇನ್ನ್ಯಾವುದೋ ಕಾರಣಕ್ಕೆ ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಈಗಾಗಲೇ ಮಕ್ಕಳಿಗೆ ಲಸಿಕೆ ಬಂದಿರುವುದಷ್ಟೇ ಅಲ್ಲದೇ, ಆರೋಗ್ಯ ಕಾರ್ಯಕರ್ತರಿಗೆ ಹಾಗೂ ಹಿರಿಯ ನಾಗರಿಕರಿಗೆ ಬೂಸ್ಟರ್ ಡೋಸ್ ಸಹ ಹಾಕಲಾಗುತ್ತಿದೆ. ಲಸಿಕೆ ಪಡೆಯುವುದರಿಂದ ಕರೋನಾ ಬರುವುದೇ ಇಲ್ಲ ಎಂದಲ್ಲ. ಆದರೆ ಲಸಿಕೆ ಪಡೆಯದ ವ್ಯಕ್ತಿಗೆ ಹೋಲಿಸಿದರೆ, ಲಸಿಕೆ ಹಾಕಿಸಿಕೊಂಡ ವ್ಯಕ್ತಿಗೆ ಸೋಂಕು ಹೆಚ್ಚು ಬಾಧಿಸುವುದಿಲ್ಲ ಎನ್ನುವುದು ಈಗಾಗಲೇ ಸಾಬೀತಾಗಿದೆ. ಪ್ರತಿಯೊಬ್ಬ ಅರ್ಹ ನಾಗರಿಕರು ಕರೋನಾ ಲಸಿಕೆಯನ್ನು ತಪ್ಪದೇ ಪಡೆಯಬೇಕು. ರಾಜ್ಯ ಸರಕಾರದ ಒತ್ತಡಕ್ಕೆ ಅಥವಾ ಪ್ರಮಾಣ ಪತ್ರದ ಸಲುವಾಗಿಯೋ ಲಸಿಕೆ ಹಾಕಿಸಿಕೊಳ್ಳದೇ, ನಮ್ಮವರಿಗಾಗಿ ಹಾಗೂ ನಮ್ಮ ಜತೆಯಲ್ಲಿರುವವರ ಆರೋಗ್ಯ ದೃಷ್ಠಿಯಿಂದ ಲಸಿಕೆಯನ್ನು ಹಾಕಿಸಿಕೊಳ್ಳಬೇಕು.

ಸೊಂಪಾದಕೀಯ

ಮೇಕೆ ಹಾಕಿದ್ದು ನಾಕೆಜ್ಜೆ ಅಷ್ಟೇ !

ಮೇಕೆದಾಟು ಬೇಕೆಬೇಕು ಅಂತ ನಡೆದು ಸರಕಾರಕ್ಕೆ ನಡುಕ ಹುಟ್ಟಿಸುವ ಸಲುವಾಗಿಯೇ ಬೆಂಗಳೂರಿಂದ ಎಲ್ಲ ಕಾಂಗ್ರೆಸ್ ನಾಯಕರು ಸಂಗಮದಲ್ಲಿ ಸಮಾಗಮ ಆಗಿದ್ದರು. ಬಿರುಬಿರುಸಿನ ಭಾಷಣವನ್ನು ಬಿಗಿದರು. ಆದರೆ, ಮೊದಲ ದಿನವೇ ಮಹಾನಾಯಕ ಮಲ್ಲಿಕಾರ್ಜುನ ಖರ್ಗೆ ಮನೆಗೆ ಬಂದು ಕೋವಿಡ್ ಟೆಸ್ಟ್ ಮಾಡಿಸುತ್ತಿದ್ದಂತೆ ಫಸ್ಟ್ ಟೈಂ ಫಾಸಿಟಿವ್ ರಿಸಲ್ಟ್ ಬಂತಂತೆ. ಆದ್ರೂ, ನಡಿಗೆ ಬಿಡೋದೆ ಇಲ್ಲ ಅಂತ ಅವರ ಮಗ ಪ್ರಿಯಾಂಕ ಖರ್ಗೆ ಸೇರಿ ಉಳಿದವರು ನಡೆಯುತ್ತಿದ್ದರು. ಆಯೋಜಕ ಡಿಕೆಯಂತೂ ಕೆಮ್ಮುಕೆಮ್ಮುತ್ತಲೇ ನಮ್ ಪಾದಯಾತ್ರೆ ಬಗ್ಗೆ ಯಾರೂ ಕೆಮ್ಮಂಗಿಲ್ಲ ಅಂತ ಹಾರಾಡಿ, ತೂರಾಡಿದರು. ಆದರೆ ಎರಡನೆ ದಿನಕ್ಕೆ ಸಿದ್ದರಾಮಯ್ಯ ಆಬ್ಸೆಂಟ್. ಪಾದಯಾತ್ರೆ ಸಿದ್ದರಾಮಯ್ಯ ಅವರಿಗೆ ಬೇಕಿಲ್ಲ, ಡಿಕೆಶಿ ಅಸ್ತಿತ್ವಕ್ಕೆ ನಡೆಯುತ್ತಿರುವ ಯಾತ್ರೆ ಇದು ಅಂತ ಗುಲ್ಲಾಗೋಯ್ತು. ಆಮೇಲೆ ಅದ್ ಏನಾಯ್ತೋ ಏನೋ ಒಂದು ದಿನ ಬಿಟ್ಟು ಸಿದ್ದರಾಮಯ್ಯ ಮರಳಿ ಪಾದಯಾತ್ರೆ ಸೇರಿಕೊಂಡು ಮತ್ತಷ್ಟು ದೂರ ಮಡೆದರು. ಸಿದ್ದರಾಮಯ್ಯ ಬರುತ್ತಿದ್ದಂತೆ ಪಾದಯಾತ್ರೆಗೆ ಕಳೆಯೇನೋ ಬಂತು, ಆದರೆ, ಸಿದ್ದರಾಮಯ್ಯ ಮುಂದೆ ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅನ್ನೋರು, ಡಿಕೆಶಿ ಮುಂದೆ ಮುಂದಿನ ಮುಖ್ಯಮಂತ್ರಿ ಡಿಕೆಶಿ ಅನ್ನೋರ ಸಂಖ್ಯೆ ಡಿವೈಡ್ ಆಯ್ತು. ಈ ಡಿವೈಂಡಿಂಗ್ ಪಾಲಿಸಿ ನಡುವೆಯೂ ಪಾದಯಾತ್ರೆ 45 ಕಿ.ಮೀ ಕ್ರಮಿಸಿತು. ಆದರೆ, ರಾಮನಗರ ಬರುತ್ತಿದ್ದಂತೆ ಕುಮಾರಣ್ಣನ್ ಒತ್ತಡಾನೂ ಜಾಸ್ತಿಯಾಯ್ತು. ಸರಕಾರಕ್ಕೆ ಹೈಕೋರ್ಟ್ ಕೂಡ ತರಾಟೆ ತಗೋತು. ನೀವ್ ನಿಲ್ಲಿಸೋಕೆ ಆಗುತ್ತಾ, ಇಲ್ಲ ನಾವೇ ನಿಲ್ಲಿಸಬೇಕಾ ಅಂತ ಪ್ರಶ್ನೆ ಮಾಡ್ತು. ಮೊದಲೇ ಎಲ್ಲವನ್ನೂ ಕೋರ್ಟ್ ಹೇಳಿದ ಮೇಲೆ ಮಾಡೋದು ಅನ್ನೋ ಅಪವಾದ ಹೊತ್ತಿರೋ ಸರಕಾರ ಈಗಲೂ ಸುಮ್ಮನಿದ್ರೆ, ಇಲ್ಲೂ ಜನ ಆಡ್ಕಂಡ್ ನಗ್ತಾರೆ ಅಂತೇಳಿ, ಸರಿ ಅಂತ ಒಂದ್ ಆದೇಶ ಮಾಡೇ ಬಿಡ್ತು, ಆದೇಶದ ಜತೆಗೆ ಸಿಎಂ ಕಾಂಗ್ರೆಸ್ ನಾಯಕರಿಗೊಂದು ಪತ್ರ ಬರೆದು, ಬ್ಯಾಡ ಸ್ವಾಮಿ ಇದೆಲ್ಲ ಎಂದು ಬೇಡಿಕೊಂಡರು. ಅದನ್ನೇ ಕಾಯ್ತಿದ್ದ ಕಾಂಗ್ರೆಸ್ ನಾಯಕರು, ಪಾದಯಾತ್ರೆ ರಾಮನಗರಕ್ಕೆ ಲಾಸ್ಟ್. ಆದ್ರೆ, ಇದು ಕೋವಿಡ್ ಇರೋ ಕಾರಣಕ್ಕೆ ಮಾತ್ರ. ಕೋವಿಡ್ ಕಡಿಮೆ ಆಗ್ತಿದ್ದಂಗೆ ಮತ್ತೇ ಇಲ್ಲಿಂದಲೇ ಸ್ಟಾರ್ಟ್ ಅಂತ ಅಂದ್ರು. ಈಗ ಜನ ಪಾದಯಾತ್ರೆ ನಡೆದಿದ್ದು, ರಾಮನಗರದಲ್ಲಿ ಒಂದು ಜೆಡಿಎಸ್ ಮತ್ತು ಬಿಜೆಪಿಗೆ ಟಾಂಗ್ ಕೊಡಬೇಕು ಅನ್ನೋ ಕಾರಣಕ್ಕೆ ಮಾತ್ರ. ಬೆಂಗಳೂರುವರೆಗೆ ನಡೆಯೋಕೆ ಕಾಂಗ್ರೆಸ್ ನಾಯಕರ ಕಾಲುಗಳು ಕೇಳ್ತಿರಲಿಲ್ಲ. ತನೆ ಹೊತ್ತವರಿಗೆ ಇಲ್ಲಿ ನಮ್ಮದು ಹವಾ ಇದೆ ಅನ್ನೋದನ್ನು ತೋರಬೇಕಿತ್ತು ಮತ್ತು ಯಾರಪ್ಪ ಗಂಡುಸ್ರು, ಕೆಲ್ಸ ಮಾಡಿ ತೋರಿಸ್ರೋ ಎಂದವರಿಗೆ ಒಂದಷ್ಟು ಗಂಡುಸ್ತನ ತೋರಿಸಬೇಕು ಅನ್ನೋದು ಉದ್ದೇಶವಾಗಿತ್ತು. ಅದಕ್ಕೆ ಅದು ರಾಮನಗರಕ್ಕೆ ತಾತ್ಕಾಲಿಕ ತಡೆಯಾಗಿದೆ ಎಂದು ಮಾತಾಡ್ತಿದ್ದಾರೆ. ಈಗ ಅಲ್ಲಿಂದ ಇಲ್ಲಿಯವರೆಗೆ ಖರ್ಗೆ ಥರಹವೇ ಮತ್ತೆಷ್ಟು ನಾಯಕರು ಮತ್ತು ಇನ್ನೆಷ್ಟು ಕಾರ್ಯಕರ್ತರು ಕ್ವಾರಂಟೈನ್ ಆಗ್ತಾರೆ ಕಾದು ನೋಡಬೇಕಿದೆ.

ಸಂಪಾದಕರ ಸದ್ಯಶೋಧನೆ

ಮಾ.ನಾ.ಚೌಡಪ್ಪ ನೆನಪು

ಮೊನ್ನೆ 'ಪ್ರಜಾಮತ' ಪತ್ರಿಕೆಯ ಮಾಲೀಕ ಮತ್ತು ಸಂಪಾದಕರಾಗಿದ್ದ ಬಿ.ಎನ್.ಗುಪ್ತ ಬಗ್ಗೆ ಬರೆಯುವಾಗ, ಮಾ.ನಾ.ಚೌಡಪ್ಪ ಎಂದೇ ಪರಿಚಿತರಾದ ತುಮಕೂರು ಜಿಲ್ಲೆ, ತುರುವೇಕೆರೆ ತಾಲೂಕಿನ ಮಾಯಸಂದ್ರ ನಾರಸೀದೇವರಯ್ಯ ಚೌಡಪ್ಪ ಅವರ ಬಗ್ಗೆ ಪ್ರಸ್ತಾಪಿಸಿದ್ದೆ. ಮೈಸೂರು ಅರಸರು ಮತ್ತು ದಿವಾನರ ವಿರುದ್ಧ ಬರೆದಿದ್ದಕ್ಕೆ 'ಪ್ರಜಾಮತ'ಕ್ಕೆ ನೀಡಿದ ಅನುಮತಿಯನ್ನು ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರು ರದ್ದು ಮಾಡಿದಾಗ, ಪತ್ರಿಕೆಯನ್ನು ಮದರಾಸಿನಿಂದ ಹೊರತರಲು ಗುಪ್ತ ನಿರ್ಧರಿಸಿದರು. ಆಗ ಗುಪ್ತ ಅವರಿಗೆ ಹೆಗಲು ಕೊಟ್ಟವರು ಮಾ.ನಾ.ಚೌಡಪ್ಪ. ಚೌಡಪ್ಪನವರನ್ನು ಕಂಡರೆ ಗುಪ್ತ ಅವರಿಗೆ ಬಹಳ ವಿಶ್ವಾಸ. 'ಪ್ರಜಾಮತ' ವಾರಪತ್ರಿಕೆಯ ಸಂಪೂರ್ಣ ಹೂರಣವನ್ನು ಚೌಡಪ್ಪನವರೇ ನಿರ್ವಹಿಸುತ್ತಿದ್ದರು. ವಾರದಲ್ಲಿ ಒಂದು ದಿನ ಅಂದರೆ ಪತ್ರಿಕೆಯನ್ನು ಮುದ್ರಣಕ್ಕೆ ಕಳಿಸುವ ಹಿಂದಿನ ದಿನ, ಗುಪ್ತ ಅವರು ಬೆಂಗಳೂರಿನಿಂದ ಮದರಾಸಿಗೆ ಹೋಗಿ ಪತ್ರಿಕೆಯ ಎಲ್ಲ ಪುಟಗಳನ್ನೂ ನೋಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ, ಕಾರ್ಯದ ಒತ್ತಡದಿಂದಾಗಿ ಗುಪ್ತ ಅವರಿಗೆ ಮದರಾಸಿಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಚೌಡಪ್ಪ ಇದ್ದ ಮೇಲೆ ತಲೆ ಕೆಡಿಸಿಕೊಳ್ಳಬೇಕಿಲ್ಲ ಎಂದು ಪತ್ರಿಕೆಯ ಸಂಪೂರ್ಣ ಭಾರವನ್ನು ಅವರ ಮೇಲೆಯೇ ಹಾಕುತ್ತಿದ್ದರು. ಮೈಸೂರಿನಲ್ಲಿ ಇಂಟರ್ ಮೀಡಿಯೇಟ್ ಓದುವಾಗ ಚೌಡಪ್ಪನವರು ನಾ.ಕಸ್ತೂರಿ ಅವರ ಸಂಪರ್ಕಕ್ಕೆ ಬಂದರು. ಅವರ ಒಡನಾಟದಿಂದ ಸಾಹಿತ್ಯ, ಇತಿಹಾಸ ಮತ್ತು ಬಾನುಲಿಯಲ್ಲಿ ಆಸಕ್ತಿ ಬೆಳೆಸಿಕೊಂಡರು. ಮದರಾಸು ಆಕಾಶವಾಣಿಯಲ್ಲಿ ಉದ್ಘೋಷಕರಾಗಿ ಕೆಲಸ ಮಾಡುವಾಗ ಗುಪ್ತ ಅವರ ಸಂಪರ್ಕಕ್ಕೆ ಬಂದರು. ಕೆಲ ವರ್ಷಗಳ ಬಳಿಕ, 'ಪ್ರಜಾಮತ' ಬೆಂಗಳೂರಿಗೆ ಸ್ಥಳಾಂತರವಾದಾಗ, ಗುಪ್ತ ಅವರ ವರಾತಕ್ಕೆ ಕಟ್ಟುಬಿದ್ದು ಚೌಡಪ್ಪನವರು ಬೆಂಗಳೂರಿಗೆ ಬಂದರು. ಯಾವ ಕಾರಣಕ್ಕೂ ಪತ್ರಿಕೆಯನ್ನು ಬಿಟ್ಟುಕೊಡಬಾರದು ಎಂದು ನಿರ್ಧರಿಸಿದ್ದರು. ತೆಲುಗು ಮಾತೃಭಾಷಿಕರಾಗಿದ್ದ ಗುಪ್ತ, ಸಂಪಾದಕೀಯ ನಿರ್ವಹಣೆಯನ್ನು ಚೌಡಪ್ಪನವರಿಗೆ ಬಿಟ್ಟಿದ್ದರು. ಬ್ರಿಟಿಷರ ಆಡಳಿತ ವ್ಯಾಪ್ತಿಯಲ್ಲಿದ್ದ ಮೈಸೂರು ಸಂಸ್ಥಾನದವರು 'ಪ್ರಜಾಮತ' ಪ್ರಕಟಣೆಯನ್ನು ಮತ್ತೊಮ್ಮೆ ನಿಷೇಧಿಸಿದಾಗ, ರಾತ್ರೋರಾತ್ರಿ ಮುಂಬಯಿ ಕರ್ನಾಟಕದ ಭಾಗವಾಗಿದ್ದ ಹುಬ್ಬಳ್ಳಿಗೆ ಹೋಗಿ, ಅಲ್ಲಿಂದ ಪತ್ರಿಕೆಯನ್ನು ಹೊರಡಿಸಲು ಚೌಡಪ್ಪ ನೆರವಾದರು. ಈ ಮಧ್ಯೆ ಚೌಡಪ್ಪ ಅವರ ಬಗ್ಗೆ ಕೆಲವರು ಗುಪ್ತ ಅವರಿಗೆ ಚಾಡಿ ಹೇಳಿ ಅವರಿಬ್ಬರ ಸಂಬಂಧ ಹಳಸುವಂತಾಯಿತು. ಆಗ ಚೌಡಪ್ಪನವರು 'ಸಂಯುಕ್ತ ಕರ್ನಾಟಕ' ಕನ್ನಡದ ಮೊದಲ ಸಿನಿಮಾ ಪತ್ರಿಕೆ 'ವಾಕ್ಚಿತ್ರ'ವನ್ನು ಸೇರಿದರು. ಅಲ್ಲಿ ಎರಡು ವರ್ಷ ಕೆಲಸ ಮಾಡಿದ ಬಳಿಕ ಬೆಂಗಳೂರು ಆಕಾಶವಾಣಿಯನ್ನು ಸೇರಿ, ನಿವೃತ್ತರಾಗುವ ತನಕವೂ ಅಲ್ಲಿಯೇ ಇದ್ದರು. ನಿವೃತ್ತರಾದ ಬಳಿಕ, ಕಾಂಗ್ರೆಸ್ ಪಕ್ಷದ 'ಕಾಂಗ್ರೆಸ್ ಸಂದೇಶ' ಎಂಬ ಪತ್ರಿಕೆಯ ಪ್ರಕಟಣೆಯ ಜವಾಬ್ದಾರಿ ನಿರ್ವಹಿಸಿದರು. ಹೀಗಾಗಿ ಅವರು ಕಾಂಗ್ರೆಸ್ ನಾಯಕರ ನಿಕಟ ಸಂಪರ್ಕಕ್ಕೆ ಬಂದರು. ದೇವರಾಜ ಅರಸು ರಾಜ್ಯದ ಮುಖ್ಯಮಂತ್ರಿಯಾದಾಗ, ಚೌಡಪ್ಪನವರನ್ನು ತಮ್ಮ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಳ್ಳಲು ನಿರ್ಧರಿಸಿದ್ದರು. ಆದರೆ ಇದೇ ಸಮಯಕ್ಕೆ ನಿರಂಜನ ಅವರು 'ಕಿರಿಯರ ವಿಶ್ವಕೋಶ– ಜ್ಞಾನಗಂಗೋತ್ರಿ' ಸಿದ್ಧಪಡಿಸುವ ಬೃಹತ್ ಯೋಜನೆ ಹಮ್ಮಿಕೊಂಡಿದ್ದರು. ಈ ಯೋಜನೆಯ ಪ್ರಧಾನ ಸಂಪಾದಕರಾದ ನಿರಂಜನ, ಸಾಹಿತ್ಯ ಸಂಪಾದಕರಾಗಿ ಬರುವಂತೆ ಆಹ್ವಾನಿಸಿದರು. ಬೇರೆಯವರಾಗಿದ್ದರೆ, ಮುಖ್ಯಮಂತ್ರಿಯವರ ಆಹ್ವಾನ ಸ್ವೀಕರಿಸದೇ ಇರುತ್ತಿರಲಿಲ್ಲ. ಆದರೆ ಚೌಡಪ್ಪನವರು ಜ್ಞಾನಗಂಗೋತ್ರಿ, ಕೆಲಸವನ್ನು ಆರಿಸಿಕೊಂಡರು. ಕೆಲವು ಐತಿಹಾಸಿಕ ಕಾದಂಬರಿಗಳನ್ನು ಬರೆದ ಚೌಡಪ್ಪನವರು, ಕನ್ನಡ ಚಲನಚಿತ್ರ ಪತ್ರಿಕೋದ್ಯಮಕ್ಕೆ ಅಡಿಪಾಯ ಹಾಕಿದವರಲ್ಲೊಬ್ಬರು.

ಪಾದಯಾತ್ರೆ; ಕಾಂಗ್ರೆಸಿನ ಡ್ರಾಮಾ!

ಕಳೆದ ವರ್ಷದಲ್ಲಿ ನಡೆದ ವಿಧಾನಸಭೆಯ ಅಧಿವೇಶನದಲ್ಲಿ ಮೇಕೆದಾಟಿನ ವಿಷಯವನ್ನು ಎಷ್ಟು ನಿಮಿಷಗಳ ಕಾಲ ಪ್ರಸ್ತಾಪಿಸಲಾಗಿದೆ ? ನಿನ್ನೆ ಮೊನ್ನೆ ಬೆಳಗಾವಿಯಲ್ಲಿ ನಡೆದ ವಿಧಾನಸಭಾ ಕಲಾಪದಲ್ಲಿ ನನಗೆ ತಿಳಿದಿರುವಂತೆ ಮೇಕೆದಾಟಿನ ವಿಷಯವನ್ನು ಗಂಭೀರವಾಗಿ ಚರ್ಚಿಸಲೇ ಇಲ್ಲ.

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

camohanbn@gmail.com

1985 ರಲ್ಲಿ ಕನ್ನಡದಲ್ಲಿ ಕುರಿದೊಡ್ಡಿ ಕುರುಕ್ಷೇತ್ರ ಸಿನಿಮಾ ತೆರೆಕಂಡಿತ್ತು, ಈ ಸಿನಿಮಾದಲ್ಲಿ ಲೋಕನಾಥ್ ಹಾಗೂ ಧೀರೇಂದ್ರ ಗೋಪಾಲ್ ನಡುವೆ ತಮ್ಮ ಗ್ರಾಮದ ನಾಯಕತ್ವದ ವಿಚಾರದಲ್ಲಿ ನಡೆಯುವ ವಿವಾದಗಳೇ ಸಿನಿಮಾದ ಮುಖ್ಯ ಕಥಾ ಹಂದರ. ಗ್ರಾಮದವರೆಲ್ಲಾ ಸೇರಿ ಕುರುಕ್ಷೇತ್ರ ನಾಟಕವಾಡಲು ನಿರ್ಧರಿಸುತ್ತಾರೆ. ನಾಟಕದ ಮೇಷ್ಟ್ರಾಗಿ ಮುಸುರಿ ಕೃಷ್ಣಮೂರ್ತಿಯ ಆಗಮನವಾಗುತ್ತದೆ. ನಾಟಕದ ಪಾತ್ರಗಳ ಹಂಚಿಕೆಯಲ್ಲಿನ ಪೀಕಲಾಟ, ಅಭ್ಯಾಸ ಮಾಡುವಾಗುಂಟಾಗುವ ಪೀಕಲಾಟ ಪ್ರೇಕ್ಷಕನಿಗೆ ಒಳ್ಳೆಯ ಮನೋರಂಜನೆ ನೀಡುತ್ತದೆ. ಲೋಕನಾಥ್ ಹಾಗೂ ಧೀರೇಂದ್ರ ಗೋಪಾಲ್ ನಡುವಣ ಸಾಮರ್ಥ್ಯವನ್ನು ತಮ್ಮ ಹಿರಿಯ ರಾಜಕೀಯ ನಾಯಕರಿಗೆ ಸಾಬೀತುಪಡಿಸುವಲ್ಲಿ ಕಾಣಬರುವ ವಿವಾದಗಳು ಪ್ರೇಕ್ಷಕನಿಗೆ ಮತ್ತಷ್ಟು ಮನೋರಂಜನೆಯನ್ನು ನೀಡುತ್ತದೆ.

ಈಗ ಆ ಚಿತ್ರ ಏಕೆ ನೆನಪಾಯಿತೆಂದರೆ ಕುರಿದೊಡ್ಡಿ ಕುರುಕ್ಷೇತ್ರ ಸಿನಿಮಾದಲ್ಲಿ ನಡೆಯುವ ಕುರುಕ್ಷೇತ್ರ ನಾಟಕದ ಮನೋರಂಜನೆಯ ರೀತಿಯಲ್ಲಿ ಕಾಂಗ್ರೆಸ್ಸಿನ ಮೇಕೆದಾಟು ಪಾದಯಾತ್ರೆ ಕರ್ನಾಟಕದ ಜನರಿಗೆ ಉತ್ತಮ ಮನೋರಂಜನೆ ನೀಡಿತ್ತು. ಆ ಚಿತ್ರದಲ್ಲಿರುವಂತೆ ಇಲ್ಲಿಯೂ ಸಿದ್ದರಾಮಯ್ಯ ಹಾಗು ಡಿ.ಕೆ.ಶಿವಕುಮಾರ್ ನಡುವೆ ತಮ್ಮ ರಾಜಕೀಯ ಸಾಮರ್ಥ್ಯದ ಪೈಪೋಟಿಯ ಮನೋರಂಜನೆ ಎದ್ದು ಕಾಣುತ್ತಿತ್ತು. ಸಿದ್ದರಾಮಯ್ಯ ಗಣಿ ಹಗರಣದ ಸಂದರ್ಭದಲ್ಲಿ ಬಳ್ಳಾರಿಯಿಂದ ಪಾದಯಾತ್ರೆ ಮಾಡಿ ಮುಖ್ಯಮಂತ್ರಿಯಾದ ರೀತಿಯಲ್ಲಿ ತಾನೂ ಸಹ ಪಾದಯಾತ್ರೆ ಮಾಡಿದರೆ ಮುಖ್ಯಮಂತ್ರಿಯಾಗಬಹುದೆಂಬ ಕನಸನ್ನು ಡಿ.ಕೆ.ಶಿವಕುಮಾರ್ ಕಂಡು, ಪಾದಯಾತ್ರೆಗೆ ದುಮುಕಿದ್ದರು. ಸಿದ್ದರಾಮಯ್ಯ ಪಾದಯಾತ್ರೆ ಮಾಡಿದ ಸಂದರ್ಭದಲ್ಲಿ ಕಾನೂನಾತ್ಮಕವಾಗಿ ಒಂದಷ್ಟು ಗಟ್ಟಿ ಅಂಶಗಳಿದ್ದವು, ಆದರೆ ಮೇಕೆದಾಟಿನ ವಿಷಯದಲ್ಲಿ ಯಾವ ದಿಕ್ಕಿನಿಂದ ನೋಡಿದರೂ ಸಹ ಕಾಂಗ್ರೆಸ್ಸಿನ ಬುಡಕ್ಕೆ ವಿವಾದಗಳು ಬರುತ್ತಿದ್ದವು. ಅದ್ಯಾವ ಪುಣ್ಯಾತ್ಮ ಡಿ.ಕೆ.ಶಿವಕುಮಾರಿಗೆ ಮೇಕೆದಾಟಿನ ಪಾದಯಾತ್ರೆಯ ಕಲ್ಪನೆಯನ್ನು ನೀಡಿದನೋ ತಿಳಿದಿಲ್ಲ. ಕುರಿದೊಡ್ಡಿ ಕುರುಕ್ಷೇತ್ರ ಸಿನಿಮಾದಲ್ಲಿ ಬರುವ ನಾಟಕದ ಮೇಷ್ಟ್ರಾದ ಮುಸುರಿ ಕೃಷ್ಣಮೂರ್ತಿಯ ರೂಪದಲ್ಲಿ DESIGN BOX ಕಂಪನಿ ಡಿ.ಕೆ.ಶಿವಕುಮಾರರನ್ನು ಮುಖ್ಯಮಂತ್ರಿ ಅಭ್ಯರ್ಥಿಯ ಪಾತ್ರ ಮಾಡಿಸುತ್ತಿದೆ. ನರೇಂದ್ರ ಮೋದಿಯವರು ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಸ್ನಾನ ಮಾಡಿ, ಪೂಜೆಗೆ ತೆರಳುವ ನೈಜ ಅಂಶವನ್ನು ಡಿ.ಕೆ.ಶಿವಕುಮಾರ ಬಳಿ ನಾಟಕೀಯವಾಗಿ ಕಾವೇರಿ ನದಿಯ ಪೂಜೆಯಲ್ಲಿ ಸ್ನಾನ ಮಾಡುವ ರೀತಿಯಲ್ಲಿ ತೋರಿಸಿ ಪ್ರಚಾರ ಗಿಟ್ಟಿಸಿಕೊಳ್ಳಲು ಹೋಗಿ,ಇಡೀ ಕರ್ನಾಟಕದ ಜನರಿಗೆ ಬಿಟ್ಟಿ ಮನರಂಜನೆ ನೀಡಿತ್ತು.ಮತ್ಯಾವುದೋ ಶಾಲೆಯಲ್ಲಿ ಸಣ್ಣ ಸಣ್ಣ ಮಕ್ಕಳು ಡಿ.ಕೆ.ಶಿವಕುಮಾರರ ಬಳಿ ಬಂದು ಕಾಲಿಗೆ ಬೀಳುವ ರೀತಿಯಲ್ಲಿ ಪ್ರಚಾರಗಿಟ್ಟಿಸುವ ಪ್ರಯತ್ನವನ್ನು ಅವರ ನಾಟಕದ ಮೇಷ್ಟ್ರು ಮಾಡಿದರು.

ಅಧಿಕಾರದಲ್ಲಿದ್ದಾಗ ಮಹದಾಯಿ ಹೋರಾಟಗಾರರಿಗೆ ಲಾಠಿ ಚಾರ್ಜ್ ಮಾಡಿಸಿದಂತಹ ಕಾಂಗ್ರೆಸ್ ಪಕ್ಷ ಯಾವ ನೈತಿಕತೆಯ ಆಧಾರದ ಮೇಲೆ ಮೇಕೆದಾಟು ಯೋಜನೆಯ ಹೆಸರಿನಲ್ಲಿ ಪಾದಯಾತ್ರೆ ಮಾಡುವುದಕ್ಕೆ ಹೊರಟಿತ್ತು? 2013 ರಿಂದ 2018ರ ನಡುವೆ ತಾವು ಆಡಳಿತದಲ್ಲಿದ್ದಾಗ ಮಾಡಿದ್ದು ಕೇವಲ ಈಕ್ಕ ಅಷ್ಟೆ! 2007ರಲ್ಲಿ ಕಾವೇರಿ ಪ್ರಾಧಿಕಾರದ ತೀರ್ಪು ಬಂದು ನೀರಿನ ಹಂಚಿಕೆಯ ಪ್ರಮಾಣ ನಿಗದಿಯಾಗಿತ್ತು ಆದರೆ ತೀರ್ಪನ್ನು ಅನುಷ್ಠಾನಗೊಳಿಸಿದ ನಂತರವಷ್ಟೇ ಮೇಕೆದಾಟು ಯೋಜನೆಯನ್ನು ಕೈಗೆತ್ತುಕೊಳ್ಳಬಹುದಾಗಿತ್ತು. ಅಂದು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರಕಾರ ಗೆಜೆಟ್ ನೋಟಿಫಿಕೇಶನ್ ತಂದದ್ದು 2013ರಲ್ಲಿ, ಆರು ವರ್ಷಗಳ ಕಾಲ ಕಾಂಗ್ರೆಸ್ ನೇತೃತ್ವದ ಕಾಂಗ್ರೆಸ್ ಸರಕಾರ ಸಮಯ ವ್ಯರ್ಥ ಮಾಡಿ ಸುಮ್ಮನೆ ಕುಳಿತಿತ್ತು ಅಥವಾ ತಮ್ಮ ರಾಜಕೀಯ ಪಾಲುದಾರ ತಮಿಳುನಾಡಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಗೆಜೆಟ್ ನೋಟಿಫಿಕೇಶನ್ ತಂದಿರಲಿಲ್ಲ. ಆಗ ಕಾಂಗ್ರೆಸ್ಸಿನಿಂದ ಗೆದ್ದಿದ್ದಂತಹ ಘಟಾನುಘಟಿ ನಾಯಕರಾದಂತಹ ಮಲ್ಲಿಕಾರ್ಜುನ ಖರ್ಗೆ,ವೀರಪ್ಪ ಮೊಯ್ಲಿ ಏನು ಕಡಲೆಕಾಯಿ ತಿನ್ನುತ್ತಿದ್ದರೇ ? ಇವರು ಅಧಿಕಾರದಲ್ಲಿದ್ದಾಗ ಸಮಯ ವ್ಯರ್ಥ ಮಾಡಿ, ಈಗ ಕಾವೇರಿಯ ಭಾವನಾತ್ಮಕ ವಿಚಾರವನ್ನು ಮುಂದಿಟ್ಟುಕೊಂಡು ಪಾದಯಾತ್ರೆಯೆಂಬ ದೊಡ್ಡ ನಾಟಕ ಆಡುತ್ತಿದ್ದಾರೆ.

ಕಳೆದ ಒಂದು ವರ್ಷದಲ್ಲಿ ನಡೆದ ವಿಧಾನಸಭೆಯ ಅಧಿವೇಶನದಲ್ಲಿ ಮೇಕೆದಾಟಿನ ವಿಷಯವನ್ನು ಎಷ್ಟು ನಿಮಿಷಗಳ ಕಾಲ ಪ್ರಸ್ತಾಪಿಸಲಾಗಿದೆ ? ನಿನ್ನೆ ಮೊನ್ನೆ ಬೆಳಗಾವಿಯಲ್ಲಿ ನಡೆದ ವಿಧಾನಸಭಾ ಕಲಾಪದಲ್ಲಿ ನನಗೆ ತಿಳಿದಿರುವಂತೆ ಮೇಕೆದಾಟಿನ ವಿಷಯವನ್ನು ಗಂಭೀರವಾಗಿ ಚರ್ಚಿಸಲೇ ಇಲ್ಲ. ಸಂಡೂರಿನ ಶಾಸಕ ತುಕಾರಾಂ ತನ್ನ ತಾಲೂಕಿನಲ್ಲಿ ತಹಶೀಲ್ದಾರ್ ಒಬ್ಬರು ತನಗೆ ಮರ್ಯಾದೆ ನೀಡಲಿಲ್ಲವೆಂಬ ವಿಷಯವನ್ನು ಒಂದು ಘಂಟೆಗಳ ಕಾಲ ಚರ್ಚಿಸಿದ ಸಿದ್ದರಾಮಯ್ಯರಿಗೆ ಮೇಕೆದಾಟಿನ ಗಂಭೀರತೆಯ ಅರಿವಿರಲಿಲ್ಲವೇ? ಕಿಲೋಮೀಟರುಗಟ್ಟಲೆ ಪಾದಯಾತ್ರೆ ಮಾಡುವೆನೆಂದು ಅಬ್ಬರಿಸುವ ಡಿ.ಕೆ.ಶಿವಕುಮಾರ್ ಎಷ್ಟು ನಿಮಿಷಗಳ ಕಾಲ ಬೆಳಗಾವಿಯ ಅಧಿವೇಶನದಲ್ಲಿ ಮೇಕೆದಾಟು ಯೋಜನೆಯ ಬಗ್ಗೆ ಚರ್ಚಿಸಿದರು ?

2013 ಮೇ ತಿಂಗಳಲ್ಲಿ ಅಧಿಕಾರಕ್ಕೆ ಬಂದಂತಹ ಕಾಂಗ್ರೆಸ್ ಮೊದಲ ಆರು ತಿಂಗಳು ಏನು ಮಾಡಿರಲಿಲ್ಲ, ನವೆಂಬರ್ 2013ರಲ್ಲಿ ಮೇಕೆದಾಟಿನ ಯೋಜನೆಯ ಡಿಪಿಆರ್ ತಯಾರಿಸಲು 4ಎ ವಿನಾಯಿತಿಗಾಗಿ ಸರಕಾರದ ಮುಂದೆ ಅರ್ಜಿ ಬರುತ್ತದೆ. ಅರ್ಜಿ ಬಂದ ಆರು ತಿಂಗಳ ನಂತರ ಅಂದರೆ ಏಪ್ರಿಲ್ 2014ರಂದು 4ಎ ವಿನಾಯಿತಿಯನ್ನು ತಿರಸ್ಕರಿಸಿ ಜಾಗತಿಕ ಟೆಂಡರ್ ಕರೆಯಲು ಸೂಚಿಸಲಾಗುತ್ತದೆ. ಸೂಚನೆ ಬಂದ ಆರು ತಿಂಗಳ ನಂತರ ಅಂದರೆ ಅಕ್ಟೋಬರ್ 2014 ರಲ್ಲಿ ಡಿಪಿಆರ್ ತಯಾರಿಸುವ ಕಂಪನಿಯನ್ನು ಆಯ್ಕೆ ಮಾಡಲು ಜಾಗತಿಕ ಟೆಂಡರ್ ಕರೆಯಲಾಗುತ್ತದೆ. ಅಧಿಕಾರಕ್ಕೆ ಬಂದ 16 ತಿಂಗಳ ಬಳಿಕ ಕರೆದ ಮೊದಲ ಟೆಂಡರ್ ಇದಾಗಿತ್ತು. ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳಲ್ಲಿ ಒಮ್ಮತ ಮೂಡದ ಕಾರಣ ಸುಮಾರು ಒಂದು ವರ್ಷದ ನಂತರ ನವೆಂಬರ್ 2015ರಲ್ಲಿ ಎಲ್ಲಾ ಟೆಂಡರ್ ಬಾಗಿದಾರರನ್ನು ತಿರಸ್ಕರಿಸಲಾಗಿತ್ತು. ಅಧಿಕಾರಕ್ಕೆ ಬಂದ ಸುಮಾರು ಮೂರು ವರ್ಷಗಳ ನಂತರ ಡಿಪಿಆರ್ ರಚಿಸಲು ಬೇಕಿರುವ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು 4G ಅನುಮತಿ ನೀಡಿದ ಕಾಂಗ್ರೆಸ್ ಮೂರು ವರ್ಷಗಳಲ್ಲಿ ಮೇಕೆದಾಟಿನ ವಿಷಯದಲ್ಲಿ ಸಾಧಿಸಿದ್ದು ದೊಡ್ಡದೊಂದು ಸೊನ್ನೆ. 4G ವಿನಾಯಿತಿ ಸಿಕ್ಕ ಕೂಡಲೇ ಮತ್ತದೇ ಹಳೆಯ EI Technologies ಕಂಪನಿಗೆ ಡಿಪಿಆರ್ ತಯಾರಿಸುವ ಕೆಲಸವನ್ನು ನೀಡಲಾಗಿತ್ತು.

ಸುತ್ತಿ ಬಳಸಿ ಮೂರುವರ್ಷಗಳ ಕಾಲಹರಣ ಮಾಡಿ ಒಂದು ಡಿಪಿಆರ್ ಪ್ರಕ್ರಿಯೆಗೆ ಚಾಲನೆ ನೀಡಿದ್ದನ್ನು ಕಾಂಗ್ರೆಸ್ ತನ್ನ ದೊಡ್ಡ ಸಾಧನೆಯೆಂದು ಹೇಳಿಕೊಳ್ಳುತ್ತಿದೆ. ಜೂನ್ 2016 ರಲ್ಲಿ ಈ ಕಂಪನಿಯೂ ಸುಮಾರು 5612 ಕೋಟಿಯ ಡಿಪಿಆರ್ ವರದಿಯನ್ನು ನೀಡಿತು. ವರದಿ ನೀಡಿದ ಹತ್ತು ತಿಂಗಳ ಬಳಿಕ ಅಂದರೆ ಮಾರ್ಚ್ 2017ರಂದು ಕಾಂಗ್ರೆಸ್ ಸರಕಾರ ತಾತ್ವಿಕ ಒಪ್ಪಿಗೆಯನ್ನು ನೀಡಿತ್ತು. ಇದಾದ ನಂತರ ಕೇಂದ್ರ ಜಲ ಆಯೋಗಕ್ಕೆ ವರದಿಯನ್ನು ಸಲ್ಲಿಸಿದ ಕಾಂಗ್ರೆಸ್, ಜಲ ಆಯೋಗವು ಸೂಚಿಸಿದ ಬದಲಾವಣೆಗಳನ್ನು ಮಾಡಿ ಮಾರ್ಚ್ 2018 ರಲ್ಲಿ ಪರಿಷ್ಕರಿಸಿದ ವರದಿಯನ್ನು ನೀಡಿತ್ತು. ತನ್ನ ಒಟ್ಟಾರೆ ಐದು ವರ್ಷದ ಅಧಿಕಾರದ ಅವಧಿಯಲ್ಲಿ ಕಾಂಗ್ರೆಸ್ ಸರಕಾರ ಕೇವಲ ಡಿಪಿಆರ್ ತಯಾರಿಸಿ ಈಗ ಯೋಜನೆಯನ್ನು ತ್ವರಿತವಾಗಿ ಜಾರಿಗೊಳಿಸಿ ಎಂದು ಪಾದಯಾತ್ರೆ ನಡೆಸುತ್ತಿರುವುದು ಹಾಸ್ಯಾಸ್ಪದವಲ್ಲದೆ ಮತ್ತೇನು? ಈತನ್ಮಧ್ಯೆ ಅರಣ್ಯ ಇಲಾಖೆಯಿಂದ ಬೇಕಿರುವಂತಹ ಒಪ್ಪಿಗೆಯನ್ನು ಪಡೆಯುವ ಪ್ರಯತ್ನವನ್ನು ಕಾಂಗ್ರೆಸ್ ಮಾಡಲಿಲ್ಲ. ಕಾಂಗ್ರೆಸ್ ಉತ್ತರ ಪ್ರದೇಶದಲ್ಲಿ ಮೋದಿ ಬಹಿರಂಗ ಸಭೆ ಮಾಡುವುದರಿಂದ ಕರೋನಾ ಹರಡುತ್ತದೆಯೆಂದು ಬೊಬ್ಬೆ ಹೊಡೆದು ತಾನೇ ವರ್ಚುಯಲ್ ಸಭೆ ಮಾಡುತ್ತಿದೆ. ಕರ್ನಾಟಕದಲ್ಲಿ ಪಾದಯಾತ್ರೆಯ ನೆಪದಲ್ಲಿ ಸಾವಿರಾರು ಜನರನ್ನು ಸೇರಿಸಿಕೊಂಡು ಕರೋನ ಹರಡಿಸುವುತ್ತಿದೆ.

ಡಿ.ಕೆ.ಶಿವಕುಮಾರ್ ಎರಡನೇ ಬಾರಿಗೆ ಸಾಮೂಹಿಕ ನಾಯಕನಾಗುವ ಪ್ರಯತ್ನವನ್ನು ಪಾದಯಾತ್ರೆಯ ಮೂಲಕ ಮಾಡುತ್ತಿದ್ದಾರೆ, ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರಕಾರದ ರೂವಾರಿ ತಾನೇ ಎಂಬಂತೆ ಬಿಂಬಿಸಿಕೊಂಡಂತಹ ಡಿ.ಕೆ.ಶಿ, ಬೆಳಗಾವಿಯ ಅಖಾಡಕ್ಕೆ ಬಂದು ಲಕ್ಷ್ಮಿ ಹೆಬ್ಬಾಳ್ಕರ್ ಮೂಲಕ ರಮೇಶ್ ಜಾರಕಿಹೊಳಿಯವರನ್ನು ಕಟ್ಟಿ ಹಾಕುವ ಪ್ರಯತ್ನ ಮಾಡಿದರು. ಪ್ರತಿಯೊಂದು ಜಿಲ್ಲೆಯಲ್ಲಿನ ಪ್ರಭಾವಿ ನಾಯಕರನ್ನು ಕಟ್ಟಿ ಹಾಕುವಲ್ಲಿ ಎಡವಿದ ಡಿ.ಕೆ.ಶಿ. ಸಮ್ಮಿಶ್ರ ಸರಕಾರದ ಪತನಕ್ಕೆ ಕಾರಣರಾದರು.

ಈಗ ಎರಡನೇ ಬಾರಿಗೆ ಸಿದ್ದರಾಮಯ್ಯರ ಹಳೇ ಸಿಲಬಸ್ ಪಾದಯಾತ್ರೆಯನ್ನು ಆಯ್ಕೆ ಮಾಡಿಕೊಂಡು ಅಲ್ಪ ಸ್ವಲ್ಪ ಇದ್ದಂತಹ ನಾಯಕತ್ವವನ್ನೂ ಕಳೆದುಕೊಳ್ಳುವತ್ತ ಸಾಗಿದ್ದಾರೆ. ಕನಕಪುರದ ಅಕ್ಕ ಪಕ್ಕದ ರಾಮನಗರ, ಚನ್ನಪಟ್ಟಣ, ಮಾಗಡಿ, ಮದ್ದೂರು ಕ್ಷೇತ್ರಗಳಲ್ಲಿ ತನ್ನ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲಾಗದ ಡಿ.ಕೆ.ಶಿವಕುಮಾರ್ ಹೇಗೆ ತಾನೆ ತನ್ನನ್ನು ತಾನು ಕರ್ನಾಟಕದ ಸಾಮೂಹಿಕ ನಾಯಕನೆಂದುಕೊಳ್ಳಲು ಸಾಧ್ಯ? ಹಣವೊಂದಿದ್ದರೆ ಸಾಕು ಏನನ್ನು ಬೇಕಾದರೂ ಪಡೆಯಬಹುದೆಂಬ ಹಠಕ್ಕೆ ಬಿದ್ದಂತಿದೆ ಡಿ.ಕೆ.ಶಿವಕುಮಾರ್ ಲೆಕ್ಕಾಚಾರ, ಕೇವಲ ಹಣದಿಂದ ಎಲ್ಲವನ್ನೂ ಪಡೆಯುವ ಹಾಗಿದ್ದರೆ ನರೇಂದ್ರ ಮೋದಿ ಭಾರತದ ಪ್ರಧಾನಮಂತ್ರಿ ಆಗುತ್ತಿರಲಿಲ್ಲ, ಬರಾಕ್ ಒಬಾಮ ಅಮೆರಿಕಾದ ಅಧ್ಯಕ್ಷರಾಗುತ್ತಿರಲಿಲ್ಲ.

ಮೇಕೆದಾಟಿನ ಪಾದಯಾತ್ರೆಯ ಮೂಲಕ ಮುಖ್ಯಮಂತ್ರಿ ಕನಸು ಕಂಡಿರುವ ಡಿ.ಕೆ.ಶಿವಕುಮಾರರಿಗೆ, ರಾಜಕೀಯ ಜೀವನದ ಮೇಲೆ ಕಳೆದ ಒಂದು ವಾರದಿಂದ ಬಿದ್ದಿರುವ ಪೆಟ್ಟಿನ ಅರಿವಾಗಿರುವಂತೆ ಕಾಣುತ್ತಿಲ್ಲ. ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ, ಡ್ರಾಮಾ ಮಾಡಿ ತಾನೊಬ್ಬ ದೊಡ್ಡ ನಾಯಕನಾಗುತ್ತೇನೆಂದು ಅಂದುಕೊಂಡಿದ್ದರೆ ಅದಕ್ಕಿಂತಲೂ ದೊಡ್ಡ ವಿಪರ್ಯಾಸ ಮತ್ತೊಂದಿಲ್ಲ. ಪಾದಯಾತ್ರೆಯ ಲಾಭ ಪಡೆಯಲು ನಾ ಮುಂದು ತಾ ಮುಂದು ಎಂಬಂತೆ ಕಾಂಗ್ರೆಸ್ಸಿನ ನಾಯಕರು ಒಂದೊಂದು ಹೇಳಿಕೆಗಳನ್ನು ನೀಡುತ್ತಿದ್ದರೂ, ಕ್ಯಾಮೆರಾ ಕಣ್ಣಿಗೆ ಡಿಕೆ ಮಾತ್ರ ಕಾಣಿಸುತ್ತಿದ್ದರು. ಯಾವಾಗ ಡಿ.ಕೆ.ಶಿಯ ಮೇಕೆದಾಟು ಪಾದಯಾತ್ರೆ ವೈಫಲ್ಯವನ್ನು ಕಂಡಿತೋ ಸಿದ್ದರಾಮಯ್ಯ ನಿಧಾನವಾಗಿ ಅದರಿಂದ ದೂರವಾಗುತ್ತಾ ಬಂದರು. ಒಟ್ಟಿನಲ್ಲಿ ಕಾಂಗ್ರೆಸ್ಸಿನ ನಾಟಕದ ಮೇಷ್ಟ್ರು ಸೃಷ್ಟಿ ಮಾಡಿದ ಮೇಕೆದಾಟು ಪಾದಯಾತ್ರೆಎಂಬ ಬಹುದೊಡ್ಡ ಡ್ರಾಮಾವೊಂದು ಒಂದು ವಾರಗಳ ಕಾಲ ಇಡೀ ಕರ್ನಾಟಕದ ಜನತೆಗೆ ಬಿಟ್ಟಿ ಮನರಂಜನೆ ನೀಡಿದ್ದು ಸುಳ್ಳಲ್ಲ.

ಅಧಿಕಾರಿಗಳೇನು ಶಾಸಕಾಂಗದ ಸೇವಕರೇ?

ನಮ್ಮ ವ್ಯವಸ್ಥೆಯಲ್ಲಿ ಅಧಿಕಾರವಿಲ್ಲದ ಪಕ್ಷದ ಸದಸ್ಯರಿಗೆ ಆಡಳಿತ ಪಕ್ಷದ ಮೇಲಿನ ದ್ವೇಷ ಅಸಹನೆಗಳು ಆಡಳಿತ ಪಕ್ಷದ ಅಧಿಕಾರಿಗಳ ಮೇಲೆ ಹೆಚ್ಚಾಗಿ ತಿರುಗಿಬೀಳುತ್ತದೆ. ಆಡಳಿತ ಪಕ್ಷಗಳು ತಮ್ಮ ಪಕ್ಷದ ಕಾರ್ಯಕರ್ತರಂತೆ ಕಂಡು ಮುಲಾಜಿನಲ್ಲಿ ಇರಿಸಿಕೊಳ್ಳುತ್ತಾರೆ.



ಹಂಪಿ ಎಕ್ಸ್‌ಪ್ರೆಸ್

ದೇವಿ ಮಹೇಶ್ವರ ಹಂಪಿನಾಯ್ಡು

1336hampiexpress1509@gmail.com

'ಬಾಯಿ ಮುಚ್ಚಿ ಕುಳಿತುಕೊಳ್ಳಿ ಎಂದು ಮೂರುಬಾರಿ, ಮುಚ್ಕೊಂಡು ಕೂತ್ಕೊಳ್ರಿ' ಎಂದು ಮೂರುಬಾರಿ ಜನಪ್ರತಿನಿಧಿಯೊಬ್ಬರು ಸರಕಾರಿ ಅಧಿಕಾರಿಗೆ ಸಂಬೋಧಿಸಿ ಗದರಿಸುವುದು ಸಮಾಜದಲ್ಲಿ ಯಾವ ಸಂದೇಶ ನೀಡುತ್ತದೆ?. ಚಿಲ್ಲರೆ ಕಾಸು ನೀಡದೆ ಮುಖ ತಿರುಗಿಸಿದರೆ ರಸ್ತೆಯಲ್ಲಿನ ಭಿಕ್ಷುಕರೇ ನಮ್ಮನ್ನು ಬೈದುಕೊಂಡು ಶಪಿಸಿಕೊಂಡು ಹೋಗುತ್ತಾನೆ. ಹೀಗಿರುವಾಗ ಸಂವಿಧಾನಾತ್ಮಕ ಹುದ್ದೆಯಲ್ಲಿರುವ ಒಬ್ಬ ಅಧಿಕಾರಿಯನ್ನು ಭಿಕ್ಷುಕನಿಗೂ ಕೇವಲವಾಗಿ ರಾಜಕಾರಣಿಗಳು ಬೈದಾಡಿದರೆ ಹುದ್ದೆಗೆ ಮತ್ತು ಮಾನವೀಯ ಮೌಲ್ಯಗಳ ಗತಿಯೇನು. ನಮ್ಮ ದೇಶದಲ್ಲಿ ಸಂವಿಧಾನದ ಪರಿಧಿಯಲ್ಲಿ ಪ್ರಜಾಪ್ರಭುತ್ವಕ್ಕಾಗಿ ಕಾರ್ಯನಿರ್ವಹಿಸುವ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ಈ ಮೂರೂ ಅಂಗಳನ್ನು ಕಾಯುವ ನಾಲ್ಕನೇ ಸ್ತಂಭ ಪತ್ರಿಕಾರಂಗ. ಈ ನಾಲ್ಕು ರಂಗಗಳಲ್ಲಿ ಪ್ರತಿಯೆಬ್ಬರಿಗೂ ಅವರದ್ದೇ ಆದ ಮೌಲ್ಯಗಳು ಹೊಣೆಗಾರಿಕೆ ಸೇವೆ ಗೌರವ ಘನತೆ ಸ್ವಾಭಿಮಾನವಿರುತ್ತದೆ. ಸರಕಾರಿ ಕಚೇರಿಯಲ್ಲಿನ ಡಿ ದರ್ಜೆಯ ನೌಕರನಿಂದ ಹಿಡಿದು ಮುಖ್ಯಮಂತ್ರಿಯವರೆಗೂ ಪ್ರತಿಯೊಬ್ಬರಿಂದಲೂ ರಾಜ್ಯಕ್ಕೆ ದೇಶಕ್ಕೆ ಅವರದ್ದೇ ಆದ ಸೇವೆ ಕೊಡುಗೆಗಳಿರುತ್ತದೆ. ಆದ್ದರಿಂದಲೇ ನಮ್ಮ ವಿಧಾನಸೌಧದ ತಲೆಬಾಗಿಲಿನಲ್ಲಿ ಸರಕಾರಿ ಕೆಲಸ ದೇವರ ಕೆಲಸ ಎಂದು ಬರೆದಿರುವುದು. ಆದರೆ ರಾಜಕಾರಣಿಗಳು ಅಧಿಕಾರಿಗಳನ್ನು ಇಷ್ಟೊಂದು ನಿಕೃಷ್ಟವಾಗಿ ಕಾಣುವುದಕ್ಕೆ ಇಬ್ಬರಲ್ಲೂ ಅವರದ್ದೇ ಆದ ಸಮಾನ ಕಾರಣಗಳೂ ಇವೆ. ಇಂದಿನ ಸಮಾಜದಲ್ಲಿ ಎಂಥ ಪೂರ್ವಗ್ರಹಗಳಿವೆಯೆಂದರೆ ಆಡಳಿತ ಪಕ್ಷದ ರಾಜ್ಯಪಾಲರಿಂದ ಹಿಡಿದು ಸರಕಾರಿ ಕಚೇರಿಯ ಗುಮಾಸ್ತನವರೆಗೂ ಪ್ರತಿಯೊಬ್ಬರೂ ವಿರೋಧ ಪಕ್ಷಗಳಿಗೆ ರಣರಂಗದಲ್ಲಿರುವ ಶತ್ರುಸೈನ್ಯದವರಂತೆ ಬಾಸವಾಗುತ್ತಾರೆ. ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ ಪ್ರತಿಭಟನೆಗಿಳಿಯುವ ರಾಜಕಾರಣಿಗಳು ಐಎಎಸ್ ಐಪಿಎಸ್ ಅಧಿಕಾರಿಗಳನ್ನೇ ಅತ್ಯಂತ ಹೀನಾಯವಾಗಿ ನಡೆಸಿಕೊಂಡು ನಿಂದಿಸಿರುವುದನ್ನು ನಾವುಗಳು ನೋಡಿದ್ದೇವೆ. ಉನ್ನತ ಅಧಿಕಾರಿಗಳ ಮೇಲೆಯೇ ಕೈ ಎತ್ತಿರುವುದನ್ನು ಕಂಡಿದ್ದೇವೆ. ಇನ್ನು ಶಾಸಕನ ಸ್ವಕ್ಷೇತ್ರದಲ್ಲಿ ಕುಂದುಕೊರತೆಗಳ ಪರಿಶೀಲನೆ ನಡೆಸುವಾಗ ಸಂಬಂಧಿಸಿದ ಸರಕಾರಿ ನೌಕರರು ಅಥವಾ ಅಧಿಕಾರಿಗಳಿಂದೇನಾದರು ತಪ್ಪಾಗಿದ್ದರಂತೂ ಅವರನ್ನು ತುಚ್ಛವಾಗಿ ಕಂಡು ತಾನೊಬ್ಬ ಮಹಾಯೋಗ್ಯನಂತೆ ಮಹಾಹರಿಶ್ಚಂದ್ರನಂತೆ ಆತನ ಮೇಲೆ ಸವಾರಿ ಮಾಡದೇ ಬಿಡುವುದಿಲ್ಲ. ಯಾವುದೇ ವ್ಯಕ್ತಿಗೆ ವೈಯಕ್ತಿವಾಗಿ ಅವನದ್ದೇ ಆದ ಘನತೆ ಗೌರವವಿರುತ್ತದೆ.

ನಮ್ಮ ವ್ಯವಸ್ಥೆಯಲ್ಲಿ ಅಧಿಕಾರವಿಲ್ಲದ ಪಕ್ಷದ ಸದಸ್ಯರಿಗೆ ಆಡಳಿತ ಪಕ್ಷದ ಮೇಲಿನ ದ್ವೇಷ ಅಸಹನೆಗಳು ಆಡಳಿತ ಪಕ್ಷದ ಅಧಿಕಾರಿಗಳ ಮೇಲೆ ಹೆಚ್ಚಾಗಿ ತಿರುಗಿಬೀಳುತ್ತದೆ. ಹಾಗೆಯೇ ಅದೇ ಅಧಿಕಾರಿಗಳನ್ನು ಆಡಳಿತ ಪಕ್ಷಗಳು ತಮ್ಮ ಪಕ್ಷದ ಕಾರ್ಯಕರ್ತರಂತೆ ಕಂಡು ಅವರಿಗೆ ಒಂದಷ್ಟು ಮುಲಾಜನ್ನು ನೀಡಿ ಇರಿಸಿಕೊಳ್ಳುತ್ತಾರೆ. ಇದರ ಮತ್ತೊಂದು ಮಜಲು ಎಂದರೆ ಜಾತೀಯತೆ. ಆಡಳಿತ ಪಕ್ಷದ ಪ್ರತಿಯೊಬ್ಬ ಶಾಸಕನೂ ಮಂತ್ರಿಯೂ ಪ್ರಮಾಣವಚನ ಸ್ವೀಕರಿಸಿದ ಕೂಡಲೇ ತಮ್ಮ ಇಲಾಖೆ ಮತ್ತು ಆಪ್ತವರ್ಗದ ಆಯಾಕಟ್ಟಿನ ಸ್ಥಳಗಳಲ್ಲಿ ತಮ್ಮದೇ ಜಾತಿಯ ಅಧಿಕಾರಿಗಳನ್ನು ನೌಕರವರ್ಗವನ್ನು ನೇಮಿಸಿಕೊಳ್ಳುವುದು ಸಹಜವಾಗಿಬಿಟ್ಟಿದೆ. ಹೀಗಾಗಿ ಅಧಿಕಾರಿಗಳು ಆಡಳಿತ ಪಕ್ಷದ ನಾಯಕರಿಗೆ ದುಂಬಾಲುಬಿದ್ದು ಅವರ ಮನೆ ಕಚೇರಿಗಳನ್ನು ಎಡತಾಕಿ ಅವರನ್ನು ಅನೇಕ ರೀತಿಯಲಿ ಸಂತೈಸಿ ಒಲಿಸಿಕೊಂಡು ತಮಗೆ ಎಲ್ಲಾ ರೀತಿಯ ಅನುಕೂಲಗಳಿರುವಂಥ ಸ್ಥಳಗಳಿಗೆ ವರ್ಗಾವಣೆ ಮಾಡಿಸಿಕೊಂಡು ಬಂದಿರುತ್ತಾರೆ. ಭ್ರಷ್ಟತನವೇ ಇಡೀ ಕಾರ್ಯಾಂಗ, ಶಾಸಕಾಂಗದ ವ್ಯವಸ್ಥೆಯನ್ನು ಕುಲಗೆಡಿಸಿ ಕೂರಿಸಿದೆ.

ಸರಕಾರಿ ಕಚೇರಿಯಲ್ಲಿ ಡಿ ದರ್ಜೆಯ ನೌಕರನೊಬ್ಬ ಏಕಾಏಕಿ ಹುದ್ದೆಯನ್ನು ಗಿಟ್ಟಿಸಿಕೊಂಡಿರುವುದಿಲ್ಲ. ತನ್ನ ಕುಟುಂಬದ ಹಿರಿಯ ಜೀವವನ್ನು ಕಳೆದುಕೊಂಡು ಅನುಕಂಪ ಆಧರಿತ ನೌಕರಿಯನ್ನು ಪಡೆದು ಬಂದಿರುತ್ತಾನೆ. ಇಲ್ಲದಿದ್ದರೆ ಸರಕಾರದಿಂದ ಕರೆ ನೀಡುವ ಮೀಸಲು ಜಾತಿ ಇನ್ನಿತರ ಮಾರ್ಗಗಳಿಂದ ಅರ್ಜಿಸಲ್ಲಿಸಿ ಅದಕ್ಕೂ ಸರಿಯಾದ ಎಡೆಯನ್ನು ಇಟ್ಟೇ ಅಧಿಕಾರಿಯ ಬಾಗಿಲಬಳಿ ಬಂದು ನಿಂತಿರುತ್ತಾನೆ. ಕೆಲಮಂದಿಗೆ ಸರಕಾರಿ ಸೇವೆಯೆಂಬುದು ತಮ್ಮ ಜೀವನದ ಕೊನೆಯವರೆಗೂ ನಂತರ ತಮ್ಮ ಮನೆಯ ಸದಸ್ಯನಿಗೂ ಸೌಲಭ್ಯಗಳನ್ನು ಪಿಂಚಣಿಯನ್ನು ನೀಡುವ ಮಹಾಅವಕಾಶ ಮತ್ತು ಹೆಮ್ಮೆಯ ಕಾಯಕವೆಂಬ ನಂಬಿಕೆಯದ್ದಾಗಿರುತ್ತದೆ. ಆದರೆ ಅನೇಕ ಮಂದಿಗೆ ಇದು ಒಮ್ಮೆ ಬಂಡವಾಳ ಹೂಡಿ ಕೊನೆಯವರೆಗೂ ಬಾಚಿಕೊಳ್ಳುವ ಒಂದು ಅವಕಾಶವಾಗಿ ಗೋಚರಿಸಿರುತ್ತದೆ. ಆದ್ದರಿಂದ ಇಲ್ಲಿ ಅಧಿಕಾರಿಗಳಿಗೆ ರಾಜಕಾರಣಿಗಳೂ ಬೇಕು, ರಾಜಕಾರಣಿಗಳಿಗೆ ಅಧಿಕಾರಿಗಳೂ ಬೇಕು. ಇದನ್ನು ನೋಡುವ ಪುಢಾರಿಗಳಿಗೆ ಕಾರ್ಯಾಂಗದ ಮೇಲಿನ ಗೌರವವೇ ಸತ್ತಿರುತ್ತದೆ. ಅಧಿಕಾರಿಗಳ ಮೇಲೆ ತಾತ್ಸರ ಮುಲಾಜು ಹೆಚ್ಚಾಗಿ ಯೇ ಇವನೇನು ಹರಿಶ್ಚಂದ್ರನಾ, ಇವನ ಯೇಗ್ಯತೆ ನಮಗೇನು ತಿಳಿದಿಲ್ವ ಎಂಬ ಅಸಡ್ಡೆ ಸ್ಥಾಪಿತವಾಗಿರುತ್ತದೆ.

ಮೇಲಿನಂತೆ ಮುಚ್ಕೊಡು ಕೂತ್ಕೊಳ್ರಿ ಎಂದು ಗದರಿದ್ದು ಸಿದ್ದರಾಮಯ್ಯನವರ ಮಗ ಶಾಸಕ ಯತೀಂದ್ರ ಸಿದ್ದರಾಮಯ್ಯ. ಮೊನ್ನೆ ತಮ್ಮ ಕ್ಷೇತ್ರದಲ್ಲಿ ಸಾಮಾನ್ಯರು ವಿದ್ಯುತ್ ಶುಲ್ಕ ಕಟ್ಟಲಿಲ್ಲವೆಂಬ ಕಾರಣಕ್ಕೆ ಚೆಸ್ಕಾಂ ಅಧಿಕಾರಿ ಮನೆಗಳ ವಿದ್ಯುತ್ ಸಂಪರ್ಕವನ್ನು ತೆಗೆದಿದ್ದರಿಂದ ರೊಚ್ಚಿಗೆದ್ದು ಹೀಗೆ ಅಧಿಕಾರಿಗೆ ಬುದ್ದಿವಾದ ಹೇಳಿದ್ದಾರೆ. ಶುಲ್ಕ ಕಟ್ಟಲಿಲ್ಲವೆಂಬ ಕಾರಣಕ್ಕೆ ಬಡವರ ಮನೆಯನ್ನು ಕತ್ತಲುಗೊಳಿಸದ್ದನ್ನು ಪ್ರಶ್ನಿಸುವುದು ಕ್ಷೇತ್ರದ ನಾಯಕನಾಗಿ ಯತೀಂದ್ರ ಅವರು ನಡೆ ಸ್ವಾಗತಾರ್ಹ.ಯತೀಂದ್ರ ಅವರು ವೃತ್ತಿಯಲ್ಲಿ ವೈದ್ಯರು. ವೈದ್ಯಕೀಯವನ್ನು ಕಲಿತವರು ಇದಕ್ಕಿಂತ ಕೆಟ್ಟದಾಗಿ ವರ್ತಿಸುವ ಮಂದಿ ಬಹಳಷ್ಟಿದ್ದಾರೆ. ಆದರೆ ಯತೀಂದ್ರ ಅವರು ತಂದೆಗೆ ತಕ್ಕ ಮಗ ಎಂಬುದನ್ನು ಸಾಬೀತು ಪಡಿಸಲು ಕೇವಲ ವಾಕ್ಚಾತುರ್ಯದಿಂದ ಸಾಧ್ಯವಿಲ್ಲ. ಅದನ್ನು ಮೀರಿ ಸಹನೆ ತಾಳ್ಮೆಯಿಂದ ವರ್ತಿಸಿ ಒಳ್ಳೆಯ ಮಾತಿನಿಂದ ಎಲ್ಲರನ್ನೂ ಗೆಲ್ಲುವಂಥ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ಉತ್ತಮ. ಅನೇಕ ಅಯೇಗ್ಯರ ಮುಂದೆ ಸಂವಿಧಾನಾತ್ಮಕ ಹುದ್ದೆಯಲ್ಲಿರುವ ಅಧಿಕಾರಿಗೆ ಆರೇಳು ಬಾರಿ ಮುಚ್ಕೊಂಡು ಮಾತುಗಳಿಂದ ಹೌಹಾರಿದ್ದು ನೆರೆದಿದ್ದ ಜನರಿಗೆ ಮಾಧ್ಯಮಗಳಲ್ಲಿ ನೋಡಿದವರಿಗೆ ಯತೀಂದ್ರರ ವರ್ತನೆ ಮತ್ತು ಅಧಿಕಾರಿಯ ಸ್ಥಿತಿ ಹೇಗೆಲ್ಲಾ ಕಾಣಬಹುದು ಮತ್ತು ಮುಂದೆ ಆ ಅಧಿಕಾರಿಯನ್ನು ಜನ ಮತ್ತು ಸಹೋದ್ಯೋಗಿಗಳು ಹೇಗೆಲ್ಲಾ ಕಾಣಬಹುದು ಎಂಬುದು ಇಲ್ಲಿ ಗಮನಾರ್ಹ. ಇನ್ನು ಮೊನ್ನಿನ ಕಾಂಗ್ರೆಸ್ ಪಾದಯಾತ್ರೆಯ ಮೊದಲ ದಿನ ಅಧಿಕಾರಿಗಳು ಡಿಕೆಶಿಯ ಆರೋಗ್ಯ ಪರೀಕ್ಷಿಸಲು ಹೋದಾಗ ಅವರ ಮಾತಿಗೆ ಸ್ಪಂದಿಸದೇ ಅವರನ್ನು ಎದುರಾಳಿಗಳಂತೆ ಕಂಡಿದು, ಗೃಹಮಂತ್ರಿ ಆರಗ ಜ್ಞಾನೇಂದ್ರ ಗೋಕಳ್ಳರೊಂದಿಗೆ ಶಾಮೀಲಾದರೆಂದು ತಮ್ಮ ಇಲಾಖೆಯ ಪೊಲೀಸರಿಗೇ ಉಗಿದದು. ಹೀಗೆ ಇಂಥ ನಡೆಗಳೆಲ್ಲಾ ಕಾರ್ಯಾಂಗದ ಶಾಸಕಾಂಗದ ಗಂಭೀರತೆಯನ್ನು ಹಾಳುಮಾಡುತ್ತದಷ್ಟೆ.

ಸಿನಿಮಾ ನಾಯಕನಂತೆ ಅಂಗಸಾಧಕನಾಗಿ ಬಂಧಿಯಾಗಿರುವ ಐಪಿಎಸ್ ಅಧಿಕಾರಿ ಎಮ್ಮೆ ತಮ್ಮಣ್ಣನಂಥ ನೀತಿಗೆಟ್ಟ ಮಂತ್ರಿಗಳ ಮುಂದೆ ದಿಕ್ಕಿಲ್ಲದವರಂತೆ ನಿಂತು ಕೋಣನ ಕಿಂದರಿಯನ್ನು ಕೇಳಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಾರೆ. ಇಂಥ ಅಸಹಜತನ ಅವೈಜ್ಞಾನಿಕತನಕ್ಕೆ ಕಾರಣವೇ ಭ್ರಷ್ಟಾಚಾರ. ಇವನೆಷ್ಟು ಸಾಚ ಎಂಬುದು ಇವನಿಗೆ ಗೊತ್ತಿರುತ್ತದೆ, ಅವನೆಷ್ಟು ಸಾಚಾ ಎಂಬುದು ಇವನಿಗೆ ತಿಳಿದಿರುತ್ತದೆ ಹೀಗಾಗಿ ಇಲ್ಲಿ ಅನೈತಿಕ ಸಹನೆ ತಾಳ್ಮೆ ಮೆರೆದು ಅಧಿಕಾರಿ ಮತ್ತು ಮಂತ್ರಿಗಳಿಬ್ಬರೂ ಆಗಿರುವುದು ಉಳಿದೆಲ್ಲರಿಗೂ ಖಾತ್ರಿಯಾಗಿರುತ್ತದೆ. ಹಾಗಂತ ಎಲ್ಲ ನೌಕರರು ಅಧಿಕಾರಿಗಳು ಹೀಗೇ ಇರುವುದಿಲ್ಲ. ಪರಮ ಪ್ರಾಮಾಣಿಕನಾಗಿ ಸೇವೆಸಲ್ಲಿಸುವ ನೌಕರ ತನ್ನ ವ್ಯಾಪ್ತಿಯ ಯಾವ ದೊಣೆನಾಯಕನಿಗೂ ಮುಲಾಜು ನೀಡುವುದಿಲ್ಲ. ಬದುಕಿನಲ್ಲಿ ಮಾನ ಮರ್ಯಾದೆ ಗೌರವವೂ ದೊಡ್ಡ ಮೌಲ್ಯವೆಂಬ ಅರಿವಿದ್ದರೆ ಸರಕಾರಿ ಅಧಿಕಾರಿಗಳು ದುರಾಸೆಗೆ ಒಳಗಾಗಿ ಜಾತಿ ಮುಲಾಜು, ಲಂಚಾವತಾರಕ್ಕೆ, ಹಣಮಾಡಲು ಅಡ್ಡದಾರಿಗಾಗಿ ಪುಢಾರಿಗಳ ಪಲ್ಲಂಗ ಹೊತ್ತು ಇರುವ ಗೌರವ ಮರ್ಯಾದೆ ಕಳೆದುಕೊಂಡು ಕೆಲಸ ಮಾಡುವುದನ್ನು ಬಿಟ್ಟು ದಿಟ್ಟತನದಿಂದ ಪ್ರಾಮಾಣಿಕತೆಯಿಂದ ಸೇವೆಯನ್ನು ಮಾಡಬೇಕಿದೆ. ಯಾವ ಪುಟಗೋಸಿ ನಾಯಕನ ಮುಂದೆಯೂ ಹೀಗೆ ಅನ್ನಿಸಿಕೊಂಡು ನಿಲ್ಲುವಂಥ ಸ್ಥಿತಿಗೆ ಒಳಗಾಗದೆ ಸಂಭಾವಿತರಾಗಿ ಸಮಾಜಕ್ಕೆ ಮಾದರಿಯಾಗಿ ನಿಲ್ಲಲಿ. ಶಾಸಕಾಂಗಕ್ಕೆ ಅದರದ್ದೆ ಆದ ಗೌರವವಿದೆ. ಕಾರ್ಯಾಂಗಕ್ಕೆ ವೇತನ ಭತ್ಯ ಪಿಂಚಣಿಯನ್ನು ರಾಜಕಾರಣಿಗಳು ನೀಡುವುದಿಲ್ಲ ಅದನ್ನು ಒದಗಿಸುವುದು ಸಾರ್ವಜನಿಕರ ಹಣದಿಂದ. ಇದನ್ನು ಅರಿತು ಜನರಿಗಾಗಿ ಸಮಾಜಕ್ಕಾಗಿ ಮಾನವೀಯ ಮೌಲ್ಯಗಳಿಂದ ಕರ್ತವ್ಯ ನಿರ್ವಹಿಸಲಿ. ಇದರಿಂದ ಶಾಸಕಾಂಗವೂ ಶುದ್ಧವಾಗುತ್ತದೆ. ಆಗ ಜನರೂ ನಿಮ್ಮ ಜತೆ ನಿಲ್ಲುತ್ತಾರೆ. ಪತ್ರಿಕೋದಮವೂ ಜತೆಯಾಗಿ ನಿಂತು ಇಂಥ ಸನ್ನಿವೇಶಗಳನ್ನು ಖಂಡಿಸಿ ನಿಮ್ಮ ಪರವಾಗಿ ನಿಲ್ಲುತ್ತದೆ. ಹಾಗಾಗದೆ ಅಯೇಗ್ಯ ನಾಲಾಯಕ್ಕು ಪುಢಾರಿಗಳು ಅಂದದೆಲ್ಲಾ ಅನ್ನಿಸಿಕೊಂಡು ಹೋಗದರೆ ಶಾಸಕಾಂಗದ ಮುಂದೆ ಕಾರ್ಯಾಂಗ ಮುಚ್ಕೊಂಡು ಇರಬೇಕಷ್ಟೆ!

ಸಾರ್ಥಕ
ಸಪ್ತಪದಿ
7
ವರ್ಷ
ಹೆಜ್ಜೆ

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪರ, ವಿರೋಧಿ ಅಲ್ಲ ಕಂಡಿದ್ದು ಹಣದ ಹೊಳೆ!

ಕರೋನಾ, ಪಾದಯಾತ್ರೆಗಳ ಗದ್ದಲದಲ್ಲಿ ಬೇರಾವುದೂ ವಿಷಯವೇ ಆಗುತ್ತಿಲ್ಲ, ಇದರ ನಡುವೆಯೇ ಕರ್ನಾಟಕ ವಿಧಾನ ಪರಿಷತ್ತಿಗೆ ಇತ್ತೀಚಿಗೆ ಹೊಳೆ ಹರಿಸಿಯೇ ಆಯ್ಕೆಯಾದ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಪ್ರಮಾಣವಚನವೂ ಅದ್ದೂರಿಯಾಗಿ ನಡೆದಿದೆ! ಪರಿಷತ್ ಸಭಾನಾಯಕ ಕೋಟಾ ಶ್ರೀನಿವಾಸ್ ಪೂಜಾರಿ ಹೊರತು ಪಡಿಸಿ ಉಳಿದವರೆಲ್ಲರ ಗೆಲುವಿನ ಸೂತ್ರ, ಹಣ ಟ್ರ್ಯಾಪ್! ಇದನ್ನುಸದನದಲ್ಲೇ, ಪಕ್ಷಾತೀತವಾಗಿ ಒಪ್ಪಿಯೂ ಆಗಿದೆ! ಪ್ರಮಾಣವಚನ ಸ್ವೀಕರಿಸಿದ ಭಾಗ್ಯವಂತರೆಲ್ಲರೂ ಹಿಂದೆ ಅಧಿಕಾರದಲ್ಲಿದ್ದವರು ಅಥವಾ ಅಧಿಕಾರವಂತರ ಸಹೋದರರು, ಮಕ್ಕಳು, ಸಂಬಂಧಿಕರು, ಇಲ್ಲವೇ ಹಿಂಬಾಲಕರು!

ವೋಟಿಗಾಗಿ ನೋಟು ಎಂಬುದು ಇತ್ತೀಚಿನ ಚುನಾವಣೆಗಳ ಅಘೋಷಿತ ಸತ್ವವಾಗಿದ್ದರೂ, ಈ ಚುನಾವಣೆಯ ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು, ಚುನಾವಣೆ ನಡೆದ ಪರಿನೋಟಿಲ್ಲದ ಕಡೆ ಮತದಾರರ ಬಿಡಿ, ಅಭ್ಯರ್ಥಿಗಳ ಆಯ್ಕೆ ಮಾಡುವ ರಾಜಕೀಯ ಪಕ್ಷಗಳೂ ನೋಟ ಹರಿಸುವುದಿಲ್ಲ ಎಂಬುದನ್ನು ಸುಸ್ಪಷ್ಟವಾಗಿಸಿದೆ! ಚುನಾವಣಾ ರಾಜಕಾರಣ ಪಾವಿತ್ರ್ಯ ಕಳೆದುಕೊಂಡು ಬಹಳ ಕಾಲವಾಗಿದೆ, ನಿಜ. ಆದರೆ ಕರ್ನಾಟಕದ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ನೇತಾರರು 'ಈ ಹಣಾಹಣಿಯಲ್ಲಿ ಹಣದ ಹೊಳೆ ಹರಿದಿದೆ, ಹೀಗಾದರೆ ಕಷ್ಟವಿದೆ' ಎಂಬ ಚಿಂತೆಯನ್ನು ಬಹಿರಂಗವಾಗಿ ಹೊರಹಾಕಿದ್ದಾರೆ. ಫಲಿತಾಂಶದ ನಂತರದ ವಿಶ್ಲೇಷಣೆ, ಈ ಭಾರಿ ಅಲೆ ನಮ್ಮ ಪರವಾಗಿದೆ ಎಂದು ಕಾಂಗ್ರೆಸ್, ಬಿಜೆಪಿ ಎರಡೂ ಹೇಳಿಕೊಂಡಿವೆ! ಜೆಡಿಎಸ್, ನಮ್ಮ ಸಾಮರ್ಥ್ಯ ಮುಂದಿನ ಚುನಾವಣೆಯಲ್ಲಿ ತೋರಿಸುತ್ತೇವೆ ಎಂದು ವಿರಮಿಸಿದೆ! ಇದು ಆಡಳಿತದ ವಿರೋಧಿ ಅಲೆಯೋ? ಪರ ಅಲೆಯೋ? ಪರ, ವಿರೋಧ ಏನೇ ಇದ್ದರೂ ಯಥೇಚ್ಛವಾಗಿ ಹರಿದದ್ದು ಹಣದ ಹೊಳೆ! ಮುಖ್ಯಮಂತ್ರಿಗಳಾದಿಯಾಗಿ ಕೆಲ ಮಂತ್ರಿಗಳೂ, ಅಧಿಕಾರದಲ್ಲಿದ್ದವರೂ, ಬಲಾಢ್ಯರೂ, 'ಈ ರೀತಿಯ ಚುನಾವಣೆ ನಡೆಸುವುದು ಕಷ್ಟ' ಎಂದು ಕೈ ಚೆಲ್ಲುವ ಹಂತ ತಲುಪಿದ್ದು ಅಪಾಯದ ಸಂಕೇತ! ನಿವೃತ್ತ ಸದಸ್ಯರ ಬಿಳ್ಕೊಡುಗೆಯ ಸಮಾರಂಭದಲ್ಲಿ ಸ್ವತಃ ಮುಖ್ಯಮಂತ್ರಿಗಳೇ ಪರಿಷತ್ತಿನ ಅಗತ್ಯ ಮತ್ತು ಆಯ್ಕೆಯ ಹಾದಿಯ ಕುರಿತು ಆತಂಕ ವ್ಯಕ್ತಪಡಿಸಿದ್ದಾರೆ. ಅಧಿಕಾರದಲ್ಲಿದ್ದವರೇ ಕಾರ್ಯ ಪ್ರವೃತ್ತರಾಗದೇ, ಪ್ರಶ್ನೆಎತ್ತಿ ಮುನ್ನೆಡೆದರೆ, ಚರ್ಚಿಸಿ ಬದಲಾವಣೆ ತರಬೇಕಾದವರು ಯಾರು? ಚುನಾವಣಾ ಆಯೋಗದತ್ತ ಬೊಟ್ಟು ಮಾಡುವ ಅಧಿಕಾರಸ್ಥರು, ತಂತಮ್ಮ ಅಧಿಕಾರಾವಧಿಯಲ್ಲಿ ಚುನಾವಣಾ ಆಯೋಗದಂತಹ ಸ್ವಾಯತ್ತ ಸಂಸ್ಥೆಗಳನ್ನು ಕುಗ್ಗಿಸಲು ತಾವೇನೇನು ಮಾಡಿದ್ದೇವೆ? ಅಭ್ಯರ್ಥಿಗಳ ಆಯ್ಕೆ, ಚುನಾವಣಾ ಪ್ರಕ್ರಿಯೆಗಳಲ್ಲಿ ತಾವೆಷ್ಟು ಪರಿಶುದ್ಧರಾಗಿ ನಡೆದುಕೊಂಡಿದ್ದೇವೆ ಎಂಬ ಆತ್ಮ ವಿಮರ್ಶೆ ಕೂಡ ಮಾಡಿಕೊಳ್ಳಬೇಕಾಗಿದೆ. ತೊಂಬತ್ತರ ದಶಕದಲ್ಲಿ ಚುನಾವಣಾ ಪ್ರಕ್ರಿಯೆಯ ಸುಧಾರಣೆಗೆ, ಶುದ್ದೀಕರಣಕ್ಕೆ ಪಣ ತೊಟ್ಟು, ಕಠಿಣ ನಿಯಮ, ನಿಯಂತ್ರಣದ ಮೂಲಕ ರಾಜಕಾರಣಿಗಳಿಗೆ ಸಿಂಹಸ್ವಪ್ನವೆನಿಸಿದ್ದ ಟಿ.ಎನ್. ಶೇಷನ್ ಅವರಿಗೂ ಅಂಕುಶ ಹಾಕಿ, ತದನಂತರ ಅವರನ್ನು ಮೂಲೆಗುಂಪು ಮಾಡುವಲ್ಲಿ ಎಲ್ಲ ರಾಜಕೀಯ ಪಕ್ಷಗಳ ಪಾಲು ತಕ್ಕ ಮಟ್ಟಿಗಿದೆ ಎಂಬುದು ಉತ್ಪ್ರೇಕ್ಷೆಯಲ್ಲವೆನಿಸುತ್ತದೆ.

ಮೇಲ್ಮನೆಯ ಅವಶ್ಯಕತೆ ಇಲ್ಲವೇ? ಚರ್ಚೆ ಅಗತ್ಯವೇ? ಸದನದಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟು ವಿಧೇಯಕವೋ, ಅಗತ್ಯ ಕಾನೂನುಗಳನ್ನೋ ರೂಪಿಸಬಹುದಲ್ಲ?! ಅಂತಹ ಪ್ರಯತ್ನದ ಆಶಯ ಯಾರಿಗೂ ಇದ್ದಂತಿಲ್ಲ. ತಂತಮ್ಮ ಕಡೆಯ ನಿರಾಶ್ರಿತರಿಗೆ ಕಾಲ ಕಾಲಕ್ಕೆ ಸ್ಥಾನ ಕಲ್ಪಿಸುವ ಅವಕಾಶ ಕಳೆದುಕೊಳ್ಳುವುದು ಯಾಕೆ ಅನಿಸುತ್ತಿರಬೇಕಲ್ಲವೇ? ಮಾತು ಮಾತಿಗೂ ಅಂಬೇಡ್ಕರ್, ಮಹಾತ್ಮ ಗಾಂಧೀ, ಪಂಡಿತ್ ನೆಹರೂ, ಸರ್ದಾರ್ ಪಟೇಲ್, ಜಯಪ್ರಕಾಶ್ ನಾರಾಯಣ್, ಮದನ ಮೋಹನ್ ಮಾಳವೀಯ, ಶ್ಯಾಮ್ ಪ್ರಸಾದ್ ಮುಖರ್ಜಿಯವರಂತಹ ಹಿರಿಯರ ಮಾತನ್ನು, ಆಶಯವನ್ನೂ ಅಲ್ಲಲ್ಲಿ ಉದ್ಧರಿಸುವ ಇವರೆಲ್ಲರಿಗೆ, ಅವರುಗಳ ಪ್ರಾಮಾಣಿಕತೆ, ಸಾಮಾಜಿಕ ಕಳಕಳಿ ಮತ್ತು ಅಭಿವೃದ್ಧಿಯ ಆಶಯ ಮಾತಿಗಷ್ಟೇ ಸೀಮಿತ.

ಜನರಿಂದ ನೇರವಾಗಿ ಆಯ್ಕೆಯಾದ ವಿಧಾನ ಸಭೆಯ ಜತೆಗೆ ಶಾಸನ ರೂಪಿಸಲು ಅನುಕೂಲವಾಗಲೆಂಬ ಆಶಯದೊಂದಿದೆ ರೂಪುಗೊಂಡ ವಿಧಾನ ಪರಿಷತ್ತು, ಮಂಡಳಿಗಳಿಗಿರುವುದು ನಿಯಮಿತವಾದ ಅಧಿಕಾರಗಳು. ಇಂತಹ ಕೌನ್ಸಿಲ್‌ಗಳು ಅಸ್ತಿತ್ವದಲ್ಲಿರುವುದು ಭಾರತದ 8 ರಾಜ್ಯಗಳಲ್ಲಿ ಮಾತ್ರ. ಪ್ರಸ್ತುತ 1/3 ರಷ್ಟು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, 1/3 ರಷ್ಟು ವಿಧಾನಸಭಾ ಸದಸ್ಯರಿಂದ ಆಯ್ಕೆಗೊಂಡ ಸದಸ್ಯರು, 1/12 ರಷ್ಟು ಪದವೀಧರ ಮತ್ತು 1/12ರಷ್ಟುಶಿಕ್ಷಕ ಪ್ರತಿನಿಧಿಗಳು ಮತ್ತು 1/6ರಷ್ಟು ರಾಜ್ಯಪಾಲರಿಂದ ನಾಮ ನಿರ್ದೇಶನಗೊಂಡ ಪ್ರತಿನಿಧಿಗಳನ್ನೊಳಗೊಂಡ ಪರಿಷತ್ತಿನ ಪ್ರಾತಿನಿಧ್ಯವನ್ನು ಪುನರ್‌ಪರಿಶೀಲಿಸುವ ಅಗತ್ಯವಂತೂ ಇದೆ. ನಾಮನಿರ್ದೇಶನದಲ್ಲೂ ಸೋತ ರಾಜಕಾರಣಿಗಳನ್ನೇ ಸಾಹಿತಿ, ಸಾಮಾಜಿಕ ಕಾರ್ಯಕರ್ತ, ಕಲಾವಿದ, ಶಿಕ್ಷಣ ತಜ್ಞ ಎಂಬೆಲ್ಲ ಸೋಗಿನಲ್ಲಿ ಪುನರ್ವಸತಿ ಕಲ್ಪಿಸುವ ಕುಕೃತ್ಯ ಕಾಲ ಕಾಲಕ್ಕೆ ಎಲ್ಲ ಸರಕಾರಗಳೂ ಮಾಡಿವೆ.

ಬದಲಾವಣೆ ಬೇಕೆನ್ನುವ ಯಾವ ರಾಜಕೀಯ ಪಕ್ಷಗಳೂ, ಮಾತು ಹೊರತು ಪಡಿಸಿ ನಿಜವಾದ ಬದಲಾವಣೆಗೆ ಮುಂದಡಿಯಿಡುತ್ತಿಲ್ಲ. ಮಹಾತ್ಮ ಗಾಂಧಿಯನ್ನು ಅನುಕೂಲಕ್ಕೆ ತಕ್ಕಂತೆ ಉದ್ಧರಿಸುವ ಇವರ್‍ಯಾರೂ Be the change you want to see in the world ಎಂಬಂತೆ ನಡೆದುಕೊಳ್ಳುವ ಭರವಸೆಯಂತೂ ಇಲ್ಲವೇ ಇಲ್ಲ! ಹಾಗಿದ್ದರೆ, ಪ್ರಜ್ಞಾವಂತ ಮತದಾರರು ಯಾಕೆ ಈ ನಿಟ್ಟಿನಲ್ಲಿ ನಮ್ಮ ಮತ ನಾವು ಮಾರಿಕೊಳ್ಳುವುದಿಲ್ಲ ಎಂಬ ನಿರ್ಧಾರಕ್ಕೆ ಬದ್ಧರಾಗಬಾರದು? ಆಗಲಾದರೂ ವ್ಯವಸ್ಥೆಯ ಶುದ್ದೀಕರಣ ಆರಂಭಗೊಂಡು, ಎಲ್ಲ ರಾಜಕೀಯ ಪಕ್ಷಗಳಲ್ಲಿ ಅಲ್ಪಸ್ವಲ್ಪ ಉಳಿದಿರುವ ಪ್ರಾಮಾಣಿಕ ರಾಜಕಾರಣಿಗಳಿಗೆ ಭರವಸೆ, ಹುಮ್ಮಸ್ಸು ದೊರಕಿಸಬಲ್ಲದು. ಇದು ಸಾಮಾಜಿಕ ಅಭಿವೃದ್ಧಿ, ಸ್ವಾಸ್ಥ್ಯದ ಕನಸುಳ್ಳ ಯುವಕರಿಗೂ ರಾಜಕೀಯ, ಆಡಳಿತದ ಸುಧಾರಣೆಯ ಭಾಗವಾಗುವ ಪ್ರೇರಕ ಶಕ್ತಿಯಾಗಬಲ್ಲದು. ಇಲ್ಲದಿದ್ದರೆ ಈಗಾಗಲೇ ವಿರಳವಾಗಿರುವ ಪ್ರಾಮಾಣಿಕರನ್ನೂ ಅಪ್ರಾಮಾಣಿಕರಾಗಿಸಿದ ಬೇಜವಾಬ್ದಾರಿ ನಮ್ಮದೇ ಆಗುವುದಿಲ್ಲವೆ?

-ಜಿ.ಪ್ರತಾಪ್ ಕೊಡಂಚ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು